KAN 401.1 Reg. No. ................................

ಕ್ರೆಡಿಟ್ ಆಧಾರಿತ ನಾಲ್ಕನೆ ಸೆಮಿಸ್ಟರ್ ಬಿ.ಎ./ಬಿ.ಎಸ್.ಡಬ್ಲ್ಯೂ. ಪದವಿ ಪರೀಕ್ಷೆ ಏಪ್ರಿಲ್ 2012

ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಪದ್ಯಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ. 1x5=5

1) ಮುಳಿದಾಕೆ ತಂದ ಮಾಲಾ
ಮಳಯಜ ತಾಮೂಲಜಾಲಮಂ ಕೆದರಿ ಕುರು
ಳ್ಗಳನೆರೆದು ಬೆನ್ನ ಮಿಳಿಯಿಂ
ಕಳಹಂಸೆಗೆ ಗಿಡಗನೆರಗಿದಂತಿರೆ ಬಡಿದಂ

ಅಥವಾ

2) ಅರಿಯದು ಅಳವು ತಿಳಿಯದು ಮನವು
ಕಾಣದೋ ಬಣ್ಣಾ
ಕಣ್ಣಿಗೆ – ಕಾನದೋ ಬಣ್ಣಾ
ಶಾಂತಿರಸವೇ ಪ್ರೀತಿಯಿಂದಾ
ಮೈದೋರಿತಣ್ಣಾ
ಇದು ಬರಿ ಬೆಳಗಲ್ಲೋ ಅಣ್ಣಾ

ಆ) ಎರಡನ್ನು ಸಂದರ್ಭ ಸಹಿತ ವಿವರಿಸಿ 2×3=6

1) ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್
2) ದಿನದಿನವು ಕೊರಗುತಿಹ ಪತಿಯ ನೋಡುವಳು
3) ನೀನಿನಿತು ಕೀಳ್‌ಮನನ್ ಎಂದರಿದೆನಿಲ್ಲಿನ್ನೆಗಂ

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 1x10=10

1) ಕನ್ನಡ ನಾಡು – ನುಡಿಯ ಬಗ್ಗೆ ಕವಿಗಳ ಮನಸ್ಸು ಹೇಗೆ ಆಲೋಚಿಸಿದೆ? ವಿಶ್ಲೇಷಿಸಿ.
2) ರಾವಣನ ಮಾನವೀಯತೆಯು ನಿನ್ನ ಮಗಳಲ್ತೆನ್ನುವಳ್ ಅನಲೆ ಎಂಬ ಕಾವ್ಯ ಭಾಗದಲ್ಲಿ ಹೇಗೆ ವ್ಯಕ್ತವಾಗಿದೆ? ವಿವೇಚಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. 1x7=7

1) ಜೈನಧರ್ಮದ ಕಟ್ಟುನಿಟ್ಟದ ಅಹಿಂಸಾತತ್ತ್ವವನ್ನು ಜನ್ನ ಹೇಗೆ ಪ್ರತಿಪಾದಿಸಿದ್ದಾನೆ? ವಿವರಿಸಿ.
2) ಜಾಗತೀಕರಣದ ಆಕ್ರಮಣದಲ್ಲಿ ಮನುಷ್ಯ ತನ್ನ ಸ್ವಂತಿಕೆಯನ್ನು ಕಳೆದುಕೊಂಡು ಬದುಕಬೇಕಾದ ದುರಂತದ ಪ್ರತಿಮೆಯಾಗಿ ಮೃಗಶಾಲೆಯ ಸಿಂಹಗಳು ಕವನವನ್ನು ಹೇಗೆ ಅರ್ಥೈಸಬಹುದು? ವಿವೇಚಿಸಿ.

II. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 1x10=10

1) ಬದುಕುವ ಕಲೆ ಗೊತ್ತಿಲ್ಲದಿರುವುದೇ ಇಂದಿನ ಪ್ರಕ್ಷುಬ್ಧ ಸಾಮಾಜಿಕ ಪರಿಸರಕ್ಕೆ ಪ್ರಮುಖ ಕಾರಣವಾಗಿದೆ ಎಂಬುದನ್ನು ಎನ್ಕೆಯವರು ಹೇಗೆ ಪ್ರತಿಪಾದಿಸಿದ್ದಾರೆ? ವಿವರಿಸಿ.
2) ಜನರಲ್ಲಿರುವ ಮೂಢನಂಬಿಕೆಗಳನ್ನು ಹೋಗಲಾಡಿಸಿ ವೈಜ್ಞಾನಿಕ ಮನೋಭಾವವನ್ನು ವಿಚಾರವಾದಿಗಳು ಹೇಗೆ ಮೂಡಿಸಬೇಕೆಂದು ಎಚ್. ನರಸಿಂಹಯ್ಯನವರು ಸೂಚಿಸುತ್ತಾರೆ? ವಿಶ್ಲೇಷಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. 1x7=7

1) ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಯುವಶಕ್ತಿಯ ಪಾತ್ರವನ್ನು ಕುರಿತು ಒಂದು ಲೇಖನ ಬರೆಯಿರಿ.

2) ಮನುಷ್ಯ ತನ್ನ ಅಂತರಂಗದಲ್ಲಿರುವ ಪ್ರೀತಿಯನ್ನು ಹೇಗೆ ಹುಡುಕಬೇಕೆಂಬುದನ್ನು ಡಾ.ರಂಗನಾಥ್‌ರವರು ಸೂಚಿಸಿದ್ದಾರೆ? ವಿವರಿಸಿ.

**III.** ಅ) ಒಂದು ಪ್ರಶ್ನೆಗೆ ಉತ್ತರಿಸಿರಿ. **1x6=6**

1) ಪ್ರಬಂಧ ಎಂದರೇನು? ಪ್ರಬಂಧದ ಪ್ರಕಾರಗಳನ್ನು ಪರಿಚಯಿಸಿ.

2) ಪತ್ರಿಕಾ ಲೇಖನವನ್ನು ಹೇಗೆ ರಚಿಸಬೇಕು? ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ. **1x3=3**

1) ಸಂದರ್ಶನ ಎಂದರೇನು? ಸಂದರ್ಶಕನು ಅನುಸರಿಸಬೇಕಾದ ವಿಭಾಗಗಳೇನು?

2) ಪ್ರಬಂಧ ರಚನೆಗೆ ಅನುಸರಿಸಬೇಕಾದ ಪ್ರಮುಖ ಸೂತ್ರಗಳಾವುವು?

**IV.** ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **1x10=10**

1) ಮೆಗಾನೆ ಪರ್ವತದ ಗಿರಿಜನರ ಜೀವನವನ್ನು ಲೇಖಕರು ಹೇಗೆ ವಿವರಿಸಿದ್ದಾರೆ?

2) ಕುಡುಗುಂಜಿ ದ್ವೀಪದ ಹಸಲರ ಬದುಕನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ?

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. **1x5=5**

1) ಕುದ್ರೆಮುಖದ ಹಾದಿಯಲ್ಲಿ ಲೇಖನದ ಸ್ವಾರಸ್ಯ ವಿವರಿಸಿ.

2) ಬೆಳ್ತಂಗಡಿ ಸುತ್ತಮುತ್ತಲಿನ ಗಿರಿಜನರ ಬಗ್ಗೆ ಬರೆಯಿರಿ.

**V.** ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ. **2x3=6**

1) ಅಮೃತಮನೆ

2) ಕವಿರಾಜಮಾರ್ಗ

3) ವಿಧಿವಾದ

ಆ) ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ. **1x5=5**

1) ಜನ್ನನ ಎರಡು ಕಾವ್ಯಗಳ ಹೆಸರೇನು?

2) ನೆನೆವುದೆನ್ನ ಮನಂ ಬನವಾಸಿ ದೇಶಮಂ – ಇದು ಯಾವ ಕಾವ್ಯದಲ್ಲಿ ಬರುತ್ತದೆ?

3) ಅಂಡಯ್ಯನ ಕಾವ್ಯದ ಹೆಸರೇನು?

4) ಕಷ್ಟಪಟ್ಟವರು ದೇವರಿಗೆ ಸಮಾನ ಎಂದು ಹೇಳಿದವರು ಯಾರು?

5) ನಿಮಗೇಕೆ ಪ್ರೀತಿ ಸಿಗುತ್ತಿಲ್ಲ? ಎಂಬ ಲೇಖನವನ್ನು ಯಾವ ಪುಸ್ತಕದಿಂದ ಆರಿಸಲಾಗಿದೆ?

******************

KAN 401.1 Reg. No. ................................

ಕ್ರೆಡಿಟ್ ಆಧಾರಿತ ನಾಲ್ಕನೇ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ

ಏಪ್ರಿಲ್ 2013

ಕನ್ನಡ ಭಾಷಾ ಪತ್ರಿಕೆ - IV

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

## ಭಾಗ – ೧ – ಕಾವ್ಯ

I. ಅ) ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ. 5

1) ಕುರಿತವರಲ್ಲದೆ ಮತ್ತಂ
ಪೆರರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್
ಕಿರುಮಕ್ಕಳುಮಂ ಮೂಗರು
ಮರಿಪಲ್ಕರಿವರ್ ವಿವೇಕದ ಮಾತುಗಳಂ

2) ಅರಿಯದು ಆಳವು ತಿಳಿಯದು ಮನವು
ಕಾಣದೋ s ಬಣ್ಣಾ
ಕಣ್ಣಿಗೆ – ಕಾಣsದೋ ಬಣ್ಣಾ
ಶಾಂತೀರಸವೇ ಪ್ರೀತಿಯಿಂದಾ
ಮೈದೋರಿತಣ್ಣಾ
ಇದು ಬರಿ – ಬೆಳಗಲ್ಲೋ ಅಣ್ಣಾ

ಆ) ಎರಡು ಸಾಲುಗಳ ಸಂದರ್ಭ ಸ್ವಾರಸ್ಯವನ್ನು ವಿವರಿಸಿ. 6

1) ಬೇವಂ ಮೆಚ್ಚಿದ ಕಾಗೆಗೆ ಮಾವಿಳಿದಪ್ಪಂತೆ ಪತಿಯೊಳಿಳಿದಾಯ್ತು ಮನಂ
2) ಆರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ
3) ಅನಲೆ ನಿನ್ನ ಮಗಳಲ್ತೆನ್ನವಳ್!

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 10

1) ಯಶೋಧರನ ಸಂಕಲ್ಪ ಹಿಂಸೆಯಿಂದ ಉಂಟಾದ ದುಷ್ಪರಿಣಾಮಗಳನ್ನು ಕವಿ ಹೇಗೆ ಚಿತ್ರಿಸಿದ್ದಾನೆ? ವಿಶ್ಲೇಷಿಸಿ.

2) ರಾವಣನ ಮಾನವೀಯತೆಯ ಮುಖವನ್ನು ಕುವೆಂಪು ಹೇಗೆ ಭಿನ್ನವಾಗಿ ಪರಿಚಯಿಸಿದ್ದಾರೆ? ವಿವರಿಸಿ.

ಈ) ಒಂದು ಪ್ರಶ್ನೆಗೆ ಉತ್ತರ ಬರೆಯಿರಿ. 7

1) ಕವಿಗಳು ಕನ್ನಡ ನಾಡನ್ನು ಹೇಗೆ ಕಂಡರಿಸಿದ್ದಾರೆ? ವಿವರಿಸಿ.

2) ಮೃಗಶಾಲೆಯ ಸಿಂಹಗಳು ಕವನದ ಆಶಯವೇನು? ವಿವರಿಸಿ.

## ಭಾಗ – ೨ – ಪ್ರಬಂಧ

II. ಅ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ. 10

1) 'ಬದುಕು ಕನಸಲ್ಲ, ಒಂದು ಕಲೆ' ಎಂಬ ಪ್ರಬಂಧವು ಬದುಕಿನ ಬಗ್ಗೆ ಧನಾತ್ಮಕ ಧೋರಣೆಯನ್ನು ಹೇಗೆ ವ್ಯಕ್ತಪಡಿಸುತ್ತದೆ? ವಿವೇಚಿಸಿ.

2) ಸಮಾಜವನ್ನು ಅರ್ಥಪೂರ್ಣವಾಗಿ ಬದಲಾಯಿಸಲು ವೈಚಾರಿಕತೆಯನ್ನು ಹೇಗೆ ಬಳಸಿಕೊಳ್ಳಬೇಕೆಂದು ಲೇಖಕರು ಸೂಚಿಸಿದ್ದಾರೆ? ವಿಶ್ಲೇಷಿಸಿ.

ಆ) ಒಂದು ಪ್ರಶ್ನೆಗೆ ಉತ್ತರ ಬರೆಯಿರಿ. 7

1) ಪರಿಸರ ಸಂರಕ್ಷಣೆಯ ಬಗ್ಗೆ ಒಂದು ಪ್ರಬಂಧ ಬರೆಯಿರಿ.

2) ಪ್ರೀತಿಯನ್ನು ಹೇಗೆ ಕಂಡುಕೊಳ್ಳಬೇಕೆಂದು ಲೇಖಕರು ಸೂಚಿಸಿದ್ದಾರೆ? ವಿವರಿಸಿ.

## ಭಾಗ – ೩ – ಕ್ರಿಯಾತ್ಮಕ ಕನ್ನಡ

III.ಅ) ಒಂದು ಪ್ರಶ್ನೆಗೆ ಉತ್ತರಿಸಿರಿ. 6

1) ಪ್ರಬಂಧ ರಚನೆಗೆ ಪೂರಕವಾದ ಅಂಶಗಳೇನು? ವಿವರಿಸಿ.

2) ಪತ್ರಿಕೆಗಾಗಿ ಮಾಡುವ ಸಂದರ್ಶನ ಹೇಗಿರಬೇಕು?

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 3

1) ಪ್ರಬಂಧದ ಪ್ರಕಾರಗಳು ಯಾವುವು? ಪರಿಚಯಿಸಿ.

2) ಪತ್ರಿಕೆಗೆ ಲೇಖನವನ್ನು ಹೇಗೆ ಬರೆಯಬೇಕು? ವಿವರಿಸಿ.

## ಭಾಗ – ೪ – ಪ್ರವಾಸ ಕಥನ

IV.ಅ) ಒಂದು ಪ್ರಶ್ನೆಗೆ ಉತ್ತರ ಬರೆಯಿರಿ. 10

1) ಕುಡುಗುಂಜಿಯ ಹಸಲರ ಬದುಕನ್ನು ಲೇಖಕರು ಹೇಗೆ ವರ್ಣಿಸಿದ್ದಾರೆ?

2) ಮೆಗಾನೆ ಪರ್ವತದ ಅನುಭವಗಳನ್ನು ಲೇಖಕರು ಹೇಗೆ ವಿವರಿಸಿದ್ದಾರೆ?

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 5

1) ಕುದುರೆಮುಖ ಏರಿದ ಅನುಭವವನ್ನು ಲೇಖಕರು ಹೇಗೆ ವಿವರಿಸಿದ್ದಾರೆ?

2) ಸೈಮನ್ ಲೋಬೋ ವ್ಯಕ್ತಿಯನ್ನು ಪರಿಚಯಿಸಿ.

## ಭಾಗ – ೫

V. ಅ) ಎರಡು ಪ್ರಶ್ನೆಗಳಿಗೆ ಟಿಪ್ಪಣಿ ರೂಪದಲ್ಲಿ ಉತ್ತರಿಸಿ. 6

1) ಆತ್ಮ ಕುರಂಗಂ

2) ಪಂಪನ ಬನವಾಸಿ ಪ್ರೇಮ

3) ವಿಭೀಷಣ

ಆ) ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿರಿ. 5

1) ಯಶೋಧರನು ದೇವಿಗೆ ಏನನ್ನು ಬಲಿಕೊಡುತ್ತಾನೆ?

2) ರಾವಣನ ತಾಯಿಯ ಹೆಸರೇನು?

3) ಡಾ.ಎಚ್.ನರಸಿಂಹಯ್ಯನವರು ಯಾವ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿದ್ದರು?

4) ಆಂಗ್ಲಭಾಷೆಯ ಯಾವ ಪದಕ್ಕೆ ಸಂವಾದಿಯಾಗಿ ಪ್ರಬಂಧ ಪದವನ್ನು ಬಳಸುತ್ತಿದ್ದೇವೆ?

5) ಹಿ.ಚಿ.ಬೋರಲಿಂಗಯ್ಯನವರ ಪ್ರವಾಸ ಕಥನದ ಹೆಸರೇನು?

**********************

KAN 401.1 Reg. No. ……………………………

ಕ್ರೆಡಿಟ್ ಆಧಾರಿತ ನಾಲ್ಕನೇ ಸೆಮಿಸ್ಟರ್ ಬಿ.ಎ./ಬಿ.ಎಸ್.ಡಬ್ಲ್ಯೂ ಪದವಿ ಪರೀಕ್ಷೆ

ಏಪ್ರಿಲ್ 2014

ಕನ್ನಡ ಭಾಷಾ ಪತ್ರಿಕೆ – IV

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಕೆಳಗಿನವುಗಳಲ್ಲಿ ಒಂದರ ಸಂದರ್ಭ, ಭಾವಾರ್ಥ ವಿವರಿಸಿ: 05

1) ಒಲಿಸಿದ ಪೆಣ್ ಪೆಜಿರೊಳ್ ಸಂ
ಚಲಿಸಿದೊಡಿದು ಸುಖಮೆ ಪರಮಸುಖಸಂಪದಮಾ
ಸಲಿಸಿ ಸಲೆ ನೆರೆವ ಮುಕ್ತಿಯ
ನೊಲಿಸುವೆನಿನ್ನೊಲ್ಲೆನುಜಿಽದ ಪೆಂಡಿರನಣ್ಪಂ

2) ಕಂಡಿತು ಕಣ್ಣು ಸವಿದಿತು ನಾಲಗೆ
ಪಡೆದಿತೀ ದೇಹಾ
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವೀ ಗೇಹಾ
ದೇವರದೀ ಮನಸಿನ ಗೇಹಾ

ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ. 06

1) ಒಲವಾದೊಡೆ ರೂಪಿನ ಕೋ
ಟಲೆ ಯೇವುದೊ

2) ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್

3) ಅವರ ಕರುಣೆಯನೊಲಿಪ
ವಿದ್ಯೆಯೇ ವಿದ್ಯೆ!

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 10

1) 'ಅಮೃತ ಮತಿಯೆಂಬ ಪಾತಕಿಯ ಮಾಯೆ ಬನವಾಯ್ತು' ಎಂದು ಯಶೋಧರ ಚಿಂತಿಸಲು ಕಾರಣವಾದ ಸನ್ನಿವೇಶ ವಿವರಿಸಿ.

2) ಬೇಂದ್ರೆಯವರು ಬೆಳಗಿನ ವರ್ಣನೆಯನ್ನು ಲೌಕಿಕ ಚಿತ್ರದಿಂದ ಆರಂಭಿಸಿ, ಆಧ್ಯಾತ್ಮಿಕ ಸಂಕೇತದವರೆಗೆ ವಿಸ್ತರಿಸಿರುವ ಪರಿಯನ್ನು ವಿವರಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ: 07

1) ಸಿಂಹಗಳು ನಾಯಿಗಳಂತೆ ಬಾಳು ಮಾಡಬೇಕಾದ ಸನ್ನಿವೇಶವನ್ನು ವಿ.ಸೀತಾರಾಮಯ್ಯ ಅವರು ತಮ್ಮ ಕವನದಲ್ಲಿ ಹೇಗೆ ಚಿತ್ರಿಸಿದ್ದಾರೆ?

2) ರಾವಣನಿಗೆ ಅನಲೆಯ ಮೇಲಿನ ಪ್ರೀತಿ ಕುವೆಂಪು ಅವರ ಕಾವ್ಯಭಾಗದಲ್ಲಿ ಹೇಗೆ ಮೂಡಿಬಂದಿದೆ?

II. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ: 10

1) ಬದುಕಿನ ಬಗೆಗಿನ ಧನಾತ್ಮಕ ಚಿಂತನೆಗಳು 'ಬದುಕು ಕನಸಲ್ಲಿ, ಒಂದು ಕಲೆ' ಎಂಬ ಪ್ರಬಂಧದಲ್ಲಿ ಹೇಗೆ ವ್ಯಕ್ತವಾಗಿವೆ?

2) 'ವೈಚಾರಿಕತೆ' ಲೇಖನದಲ್ಲಿರುವ ವೈಜ್ಞಾನಿಕ ಚಿಂತನೆಗಳನ್ನು ಸಂಗ್ರಹಿಸಿ ಬರೆಯಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ: **07**

1) ಪ್ರೀತಿ ನಮ್ಮೊಳಗೇ ಇರುತ್ತದೆ ಎಂಬುದನ್ನು 'ನಿಮಗೇಕೆ ಪ್ರೀತಿ ಸಿಗುತ್ತಿಲ್ಲ?' ಲೇಖನ ಹೇಗೆ ವಿವರಿಸುತ್ತದೆ?
2) ನೀರಿನ ಮಹತ್ವ ಕುರಿತು ಒಂದು ಪ್ರಬಂಧ ರಚಿಸಿ.

**III.** ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ: **10**

1) ಮೆಗಾನೆ ಪರ್ವತದ ಕುಣುಬಿ ಜನರ ಬದುಕನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ?
2) ಕುದುರೆಮುಖ ಪರ್ವತ ಏರಿದ ಅನುಭವಗಳನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ?

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ: **05**

1) ಕುಡುಗಂಜಿ ದ್ವೀಪದ ಹಸಲರ ಬದುಕನ್ನು ವಿವರಿಸಿ.
2) ಬೆಳ್ತಂಗಡಿ ಪರಿಸರದ ಕಲೆಗಳನ್ನು ಲೇಖಕರು ಹೇಗೆ ಪರಿಚಯಿಸಿದ್ದಾರೆ?

**IV.** ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: **06**

1) ಪ್ರಬಂಧ ರಚನೆಯ ನಿಯಮಗಳನ್ನು ವಿವರಿಸಿ.
2) ಸಂದರ್ಶನ ಮಾಡುವಾಗ ಅನುಸರಿಸಬೇಕಾದ ನಿಯಮಗಳು ಯಾವುವು?

ಆ) ಒಂದು ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರಿಸಿರಿ: **03**

1) ಸಂದರ್ಶನಕ್ಕೆ ಮಾಡಬೇಕಾದ ಪೂರ್ವತಯಾರಿಗಳಾವುವು?
2) ಪ್ರಬಂಧ ರಚನೆಗೆ ಅನುಸರಿಸಬೇಕಾದ ಸೂತ್ರಗಳು ಯಾವುವು?

**V.** ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ: **06**

1) ಕುವೆಂಪು
2) ದ. ರಾ. ಬೇಂದ್ರೆ
3) ಬಸವಣ್ಣ

ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ: **05**

1) ಯಶೋಧರ ಚರಿತೆ ಕಾವ್ಯದ ಕವಿ ಯಾರು?
2) ಬನವಾಸಿಯ ವರ್ಣನೆ ಪಂಪನ ಯಾವ ಕಾವ್ಯದಲ್ಲಿದೆ?
3) 'ನಿಮಗೇಕೆ ಪ್ರೀತಿ ಸಿಗುತ್ತಿಲ್ಲ?' ಪ್ರಬಂಧದ ಲೇಖಕರು ಯಾರು?
4) "ಈ ಭೂಮಿ ಮೇಲೆ ಜೀವಿಸಿರೋದಕ್ಕೆ ಭಗವಂತನಿಗೆ ನಾವು ಕೊಡಬೇಕಾದ ಬಾಡಿಗೆ ಅಂದರೆ ಇನ್ನೊಬ್ಬರಿಗೆ ಉಪಯೋಗವಾಗಿರೋದು" ಎಂದವರು ಯಾರು?
5) 'ಗಿರಿಜನ ನಾಡಿಗೆ ಪಯಣ' ಪ್ರವಾಸ ಕಥನ ಬರೆದವರು ಯಾರು?

**********

KAN 401.1 Reg. No. ..................................

**ಕ್ರೆಡಿಟ್ ಆಧಾರಿತ ನಾಲ್ಕನೆ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ**

**ಏಪ್ರಿಲ್ 2015**

**ಕನ್ನಡ ಭಾಷಾ ಪತ್ರಿಕೆ – IV**

**ಅವಧಿ: 3 ಗಂಟೆಗಳು** **ಒಟ್ಟು ಅಂಕಗಳು: 80**

**I.** ಅ) ಒಂದು ಪದ್ಯಭಾಗದ ಭಾವಾರ್ಥವನ್ನು ವಿವರಿಸಿ: **1×5=5**

1) ತೋರ ಮುಡಿವಿಡಿದು ಕುಡಿಯಂ
ನಾರಂ ತದೆವಂತೆ ತದೆದು ಬೀಟೆಯ ಕಾಲಿಂ
ಬಾರೇಟಿ ಬದಗನೊದೆದೊಡೆ
ಕೇರೆಪೊರಳ್ವಂತೆ ಕಾಲಮೇಲೆ ಪೊರಳ್ದಳ್

2) ಕುರಿತವರಲ್ಲದೆ ಮತ್ತಂ
ಪೆರರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್
ಕಿರುಮಕ್ಕಳುಮಂ ಮೂಗರು
ಮರಿಪಲ್ಕರಿವರ್ ವಿವೇಕದ ಮಾತುಗಳಂ

ಆ) ಇವುಗಳಲ್ಲಿ ಎರಡು ಸಾಲುಗಳ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ: **2×3=6**

1) ಬೇವಂ ಮೆಚ್ಚಿದ ಕಾಗೆಗೆ ಮಾವು ಇಳಿದಪ್ಪಂತೆ.
2) ಶಾಂತೀರಸವೇ ಪ್ರೀತಿಯಿಂದಾ ಮೈದೋರಿತಣ್ಣಾ.
3) ನಿನ್ನಯ್ಯಗಿಂ ಮಿಗಿಲ್ ನೀನ್‌ವೇಳ್ಕುಮೆನಗಲ್ತೆ?

ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರಿಸಿ: **1×10=10**

1) ಕನ್ನಡ ನಾಡು–ನುಡಿಯ ಮಹತ್ವವನ್ನು ಕವಿಗಳು ಹೇಗೆ ವಿಶ್ಲೇಷಿಸಿದ್ದಾರೆ? ವಿವೇಚಿಸಿ.
2) ಮೃಗಶಾಲೆಯ ಸಿಂಹಗಳು ಕವನದ ಆಶಯವೇನು? ಜಾಗತೀಕರಣದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿರಿ: **1×7=7**

1) ಬೆಳಗು ಕವನದಲ್ಲಿ ಪ್ರಕೃತಿ ವರ್ಣನೆ ಹೇಗೆ ವಿಭಿನ್ನವಾಗಿ ಮೂಡಿಬಂದಿದೆ? ವಿವೇಚಿಸಿ.
2) ರಾವಣನ ಮಾನವೀಯ ಗುಣವು 'ಅನಲೆ' ಕಾವ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿದೆ? ವಿಶ್ಲೇಷಿಸಿ.

**II.** ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: **1×10=10**

1) 'ಬದುಕು ಕನಸಲ್ಲ ಒಂದು ಕಲೆ' ಪ್ರಬಂಧವು ಬದುಕಿನ ಧನಾತ್ಮಕ ಧೋರಣೆಯನ್ನು ಹೇಗೆ ಪ್ರತಿಪಾದಿಸುತ್ತದೆ? ವಿವೇಚಿಸಿ.
2) ಆರಾಧನಾ ಕೇಂದ್ರಗಳು ಇಂದು ವ್ಯಾಪಾರಿ ಕೇಂದ್ರಗಳಾಗುತ್ತಿವೆಯೆ? ವೈಚಾರಿಕತೆ ಪ್ರಬಂಧದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ: **1×7=7**

1) ನೀರಿನ ಮಹತ್ವವನ್ನು ಕುರಿತು ಒಂದು ಪ್ರಬಂಧ ಬರೆಯಿರಿ.
2) ನಿಜವಾದ ಪ್ರೀತಿ ಎಂದರೇನು? ಅದನ್ನು ಅನುಭವಿಸುವ ಹಾದಿ ಹೇಗಿರಬೇಕು? ಎಂಬುದನ್ನು ರಂಗನಾಥ್ ಎಂ. ರವರ ಪ್ರಬಂಧದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

III. ಅ) ಒಂದು ಪ್ರಶ್ನೆಗೆ ಉತ್ತರಿಸಿ: 1×6=6

1) ಒಂದು ಒಳ್ಳೆಯ ಪ್ರಬಂಧ ರಚನೆಗೆ ಅನುಸರಿಸಬೇಕಾದ ಸೂತ್ರಗಳು ಯಾವುವು? ವಿವರಿಸಿ.
2) ಸಂದರ್ಶನ ಹೇಗಿರಬೇಕು? ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ: 1×3=3

1) ಪತ್ರಿಕೆಗೆ ಬರೆಯುವ ಲೇಖನ ಹೇಗಿರಬೇಕು? ವಿವರಿಸಿ.
2) ಪ್ರಬಂಧಗಳಲ್ಲಿ ಎಷ್ಟು ವಿಧ? ಸಂಕ್ಷಿಪ್ತವಾಗಿ ಪರಿಚಯಿಸಿ.

IV. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 1×10=10

1) ಕುಣುಬಿಯರ ಸಾಂಸ್ಕೃತಿಕ ಬದುಕನ್ನು ಲೇಖಕರು ಹೇಗೆ ತೆರೆದಿಟ್ಟಿದ್ದಾರೆ?
2) ಕುದುರೆಮುಖದ ಹಾದಿಯಲ್ಲಿ ಲೇಖಕರ ಅನುಭವಗಳೇನು?

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ: 1×5=5

1) ಕರಂಗೋಲು ಕುಣಿತದ ವೈಶಿಷ್ಟ್ಯವನ್ನು ತಿಳಿಸಿ.
2) ಕುಡುಗುಂಜಿ ದ್ವೀಪದ ಗಿರಿಜನರ ಬದುಕನ್ನು ಪರಿಚಯಿಸಿ.

V. ಅ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ: 3×2=6

1) ಅಮೃತಮತಿ
2) ನಾಡಗೀತೆ
3) ವಿಭೀಷಣ

ಆ) ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ: 5×1=5

1) ಜನ್ನನ ಕೃತಿಗಳಾವುವು?
2) 'ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಇದು ಯಾವ ಕವಿಯ ಹೇಳಿಕೆ?
3) 'ಬದುಕು ಕನಸಲ್ಲ, ಒಂದು ಕಲೆ' ಎಂದು ಹೇಳಿದವರು ಯಾರು?
4) ಡಾ.ಎಚ್.ನರಸಿಂಹಯ್ಯನವರು ಯಾವ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದರು?
5) 'ಪ್ರಬಂಧ' ಎಂಬ ಪದ ಇಂಗ್ಲೀಷಿನ ಯಾವ ಪದಕ್ಕೆ ಸಂವಾದಿಯಾಗಿ ಬಳಕೆಯಾಗಿದೆ?

**********

KAN 402.1

ಕ್ರೆಡಿಟ್ ಆಧಾರಿತ ನಾಲ್ಕನೇ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ – ಎಪ್ರಿಲ್ 2016

ಕನ್ನಡ ಭಾಷಾಪತ್ರಿಕೆ

ಸಮಯ: 3 ಘಂಟೆ ಅಂಕಗಳು: 80

I (ಅ) ಒಂದು ಪದ್ಯದ ಭಾವಾರ್ಥ, ಸ್ವಾರಸ್ಯವನ್ನು ವಿವರಿಸಿ. 5X1=05

(1) ಏಕೆನಿಂದಿಹೆ ಪೋಗು ಸಾಮಿತ್ರಿ ಕೋಪಿಸನೆ
ಕಾಕುತ್ಥ್ಯನಿಲ್ಲಿ ತಳುವಿದೊಡೆ ನೆರವುಂಟು ತನ
ಗೀ ಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು.

(2) ಈಗ ಕೊನೆಗಾಲದಲ್ಲಿ ನನ್ನಮ್ಮ ನಡೆದಾಡುವ ಸ್ಮಾರಕ
ಅಪ್ಪ ಅಣ್ಣ ಅಕ್ಕ ತಮ್ಮಂದಿರ ಉಳಿಕೆತ್ತನೆಯ
ಒಂದೊಂದು ಏಟಿಗೆ ಒಮ್ಮೆ ರೂಪುಗೊಂಡ
ಜಳಕದಲ್ಲಿ ತೊಯ್ದ ಶಿಲ್ಪ.

ಆ) ಎರಡರ ಸಂದರ್ಭ, ಸ್ವಾರಸ್ಯ ವಿವರಿಸಿ 3X2=06

(1) ನೆನೆದೊಡೆ ಬರ್ಪ ನಿನ್ನಾಳ್ದ
(2) ಬಲ್ಲಿದ ನೀನೆಂದು ಬಡವರ ಬಾಯಬಡಿಯಬೇಡೆಚ್ಚರಿಕೆ
(3) ಸತ್ತ ಮೇಲಾದರೂ ದೇಹ ಸೇವೆಗೆ ನಿಲ್ಲಲಿ

ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರ ನೀಡಿರಿ 10X1=10

(1) 'ಅಮ್ಮ' ಕವನ 'ಮಾತೃತ್ವದ ಚಿತ್ರಣವನ್ನು ನೀಡುತ್ತಲೇ ವಾಸ್ತವದ ಬದುಕಿನ ಚಿತ್ರವನ್ನು ಕಟ್ಟಿಕೊಡುತ್ತದೆ' ಎಂಬ ಮಾತನ್ನು ಸಮರ್ಥಿಸಿ.
(2) 'ಪೆಣ್ಣಾಗಿ ಸಂಭವಿಸಿದೊಡಲಂ ಪೊರೆವುದೆನ್ನಳೊಂದಪರಾಧಮುಂಟು' ಎಂದು ಸೀತೆ ಹೇಳಲು ಕಾರಣವಾದ ಸನ್ನಿವೇಶ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಹೇಗೆ ಮೂಡಿಬಂದಿದೆ?

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7X1=07

(1) ಮನ್ಮಥ 'ಮನಸಿಜ'ನಾದ ಸನ್ನಿವೇಶ ಕನಕದಾಸರ 'ಮೋಹನ ತರಂಗಿಣಿ'ಯಲ್ಲಿ ಹೇಗೆ ವ್ಯಕ್ತವಾಗಿದೆ?
(2) ಹೊಸಬದುಕನ್ನು ಕಟ್ಟಿಕೊಳ್ಳುವ ಹೆಣ್ಣಿನ ತುಡಿತ ಅವರುಂಟು ಅವಳ ರೆಕ್ಕೆಯುಂಟು' ಕವನದಲ್ಲಿ ಹೇಗೆ ಮೂಡಿಬಂದಿದೆ?

II ಅ) ಒಂದು ಪ್ರಶ್ನೆಗೆ ವಿವರವಾದ ಉತ್ತರ ನೀಡಿರಿ. 10X1=10

(1) ಕದ ತಟ್ಟುತ್ತಿದ್ದ ದೆವ್ವವನ್ನು ಕಂಡು ಹಿಡಿಯಲು ಲೇಖಕರು ಕೈಗೊಂಡ ಕ್ರಮಗಳೇನು? ವಿವರಿಸಿ.
(2) ಗಾರೆ ಸೀನಪ್ಪನ ವ್ಯಕ್ತಿತ್ವವನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ?

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ 7X1=07

(1) ಪ್ರಕೃತಿಯ ಸಂಕೀರ್ಣ ವಿದ್ಯಮಾನಗಳು 'ಕುಕ್ಕುಟಪಿಶಾಚ' ಪ್ರಬಂಧದಲ್ಲಿ ಹೇಗೆ ಮೂಡಿಬಂದಿದೆ?
(2) 'ಪ್ಯಾರಾನಿಗೆ ಸೈತಾನ್ ಕಾಟ' ಪ್ರಬಂಧದಲ್ಲಿ ಲೇಖಕರು ಚರ್ಚಿಸಿರುವ ವಿವಿಧ ನಂಬಿಕೆಗಳು ಯಾವುವು?

III ಅ) ಯಾವುದಾದರೂ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 10X1=10

(1) ಲೇಖಕಿಯ ಅಮೆಜಾನ್ ಕಾಡಿನ ಅನುಭವಗಳನ್ನು ಸಂಗ್ರಹಿಸಿ ಬರೆಯಿರಿ.
(2) ಲೇಖಕಿ ನಿರೂಪಿಸಿರುವ ಅಮೆಜಾನ್ ನದಿ ಪ್ರಯಾಣದ ಅನುಭವಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಆ) ಯಾವುದಾದರೂ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7X1=07

(1) ಅಮೆಜಾನ್ ಕಾಡಿನ ಬುಡಕಟ್ಟು ಜನರ ಬದುಕು ಪ್ರವಾಸೋದ್ಯಮದ ಭಾಗವಾಗಿ ಬೆಳೆದಿರುವುದು 'ಪೆರುವಿನ ಪವಿತ್ರ ಕಣಿವೆಯಲ್ಲಿ' ಕೃತಿಯಲ್ಲಿ ಹೇಗೆ ಮೂಡಿಬಂದಿದೆ?

(2) ಲೇಖಕಿ ನೇಮಿಚಂದ್ರರ 'ಕೊಲಂಬಿಯ ಪ್ರವೇಶ' ಪ್ರಸಂಗವನ್ನು ವಿವರಿಸಿ.

IV ಇ) ಒಂದು ಪ್ರಶ್ನೆಗೆ ಉತ್ತರಿಸಿ. 3X2=06

(1) ಉತ್ತಮ ಭಾಷಣಕ್ಕಿರುವ ಸೂತ್ರಗಳೇನು? ವಿವರಿಸಿ.

(2) 'ನುಡಿಚಿತ್ರ'ದ ಭಾಷೆ ಹೇಗಿರಬೇಕೆಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿ.

V ಅ) ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ 3X2=06

(1) ಕನಕದಾಸ

(2) ತಿರುಪತಿಕ್ಷೌರ

(3) ಶಿವಪೂಜೆಯಲ್ಲಿ ಕರಡಿ

ಆ) ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ 1X6=06

(1) ಕನಕದಾಸರ ಅಂಕಿತ ನಾಮ ಯಾವುದು?

(2) ಗಾಡ್ಲಿ ಹೆಸರಿನ ಮೂಲ ಯಾವುದು?

(3) ಲಕ್ಷ್ಮೀಶ ಕವಿಯ ಹುಟ್ಟೂರು ಯಾವುದು?

(4) 'ಮೋಹನ ತರಂಗಿಣಿ' ಕಾವ್ಯದ ಕವಿ ಯಾರು?

(5) ಡಾ. ಕೆ. ಷರೀಫಾರವರ ಎರಡು ಕೃತಿಗಳನ್ನು ಹೆಸರಿಸಿ.

(6) 'ಅನುದಿನದ ಅಂತರಗಂಗೆ' ಯಾರ ಕೃತಿ?

*****